



# ತಿಲಪರ್ಣಿ

★ ಚಿತ್ರ ಬರಹ: ಡಾ. ಸ್ನೇಹಾಲಿ ಜಿ. ಗಾಂವ್ಕರ

'ತಿಲ' ಎಂದರೆ ಎಳ್ಳು ಎಂಬ ಕಲ್ಪನೆ ಮನದಲ್ಲಿ ಮನೆ ಮಾಡಿರುತ್ತದೆ. ಆದರೆ ಇದು ಎಳ್ಳಲ್ಲ. ತಿಲಪರ್ಣಿ ಎಂಬ ಸಸ್ಯವು ಎಳ್ಳಿನ ಗಿಡಕ್ಕಿಂತ ವಿಭಿನ್ನವಾದದ್ದು.

ಸಾಮಾನ್ಯವಾಗಿ ಬಿಸಿಲಿನಲ್ಲಿ ಮತ್ತು ಒಣಹವೆಯಲ್ಲಿ ಬೆಳೆಯುವ ಈ ಸಸ್ಯವು ರಸ್ತೆಯ ಬದಿಗಳಲ್ಲಿ ಕಳೆಯಂತೆ ಬೆಳೆದರೂ ದಾರಿಹೋಕರನ್ನು ತನ್ನತ್ತ ಸೆಳೆಯುತ್ತದೆ. ವಾರ್ಷಿಕ ಸಸ್ಯವಾದ ಇದು ಸುಮಾರು ಎರಡರಿಂದ ಮೂರು ಅಡಿ ಎತ್ತರ ಬೆಳೆಯುತ್ತದೆ. ಗಿಡದ ಬಿಳಿ ಅಥವಾ ತಿಳಿನೇರಳೆ ಬಣ್ಣದ ಹೂವುಗಳು ನೋಡುಗರನ್ನು ಒಂದೇ ನೋಟಕ್ಕೆ ಸೆಳೆಯುತ್ತವೆ.

ಮೂರರಿಂದ ನಾಲ್ಕು ಇಂಚು ಉದ್ದದ ಕಾಯಿಯಲ್ಲಿ ಅಂದಾಜು 130 ಬೀಜಗಳಿರುತ್ತವೆ. ಈ ಬೀಜಗಳೇ ಹೊಸ ಸಸ್ಯದ ಉತ್ಪತ್ತಿಗೆ ಕಾರಣವಾಗಿದೆ.

ತಿಲಪರ್ಣಿಯ ಮೂಲ ಆಫ್ರಿಕಾ. 1857 ರಲ್ಲಿ ಹವಾಯಿಯಲ್ಲಿ ಮೊದಲು ಇದನ್ನು ಪತ್ತೆ ಮಾಡಲಾಯಿತು ಎಂದೂ ಹೇಳುತ್ತಾರೆ.

ಆಯುರ್ವೇದದಲ್ಲಿ ಈ ಸಸ್ಯದ ಬಳಕೆ ಸಾಮಾನ್ಯವಾಗಿದೆ. 16ನೇ ಶತಮಾನದಲ್ಲೇ ನರಹರಿ ಪಂಡಿತರು ತಮ್ಮ 'ರಾಜನಿಘಂಟು' ಎಂಬ ನಿಘಂಟುವಿನಲ್ಲಿ ಈ ಸಸ್ಯವನ್ನು ಪರಿಚಯಿಸಿದ್ದಾರೆ. ಡಾಗ್ ಮಸ್ಟರ್ಡ್ **(Dog Musturd)** ಎಂದು ಆಂಗ್ಲ ಭಾಷೆಯಲ್ಲಿ ಇದು ಪ್ರಸಿದ್ಧವಾಗಿದೆ. ಅಜಗಂಧ, ಬರ್ಬರಕ, ಪೂತಿಗಂಧ, ಉಗ್ರಗಂಧ ಎಂಬ ಪರ್ಯಾಯ ಪದಗಳು ಆಯುರ್ವೇದ ಶಾಸ್ತ್ರದಲ್ಲಿ ದೊರಕುತ್ತವೆ.

ಕಟು ರಸ, ಉಷ್ಣವೀರ್ಯ ಮತ್ತು ತೀಕ್ಷ್ಣಗುಣವನ್ನು ಹೊಂದಿರುವ ತಿಲಪರ್ಣಿಯನ್ನು ಜ್ವರ ಶಮನಕ್ಕೆ ಮತ್ತು ಕಾಲುನೋವಿನ ಸಮಸ್ಯೆಗಳಲ್ಲಿ ಬಳಸುತ್ತಾರೆ. ಕಫ, ವಾತ ರೋಗಗಳಿಗೆ ಈ ತಿಲಪರ್ಣಿ ರಾಮಬಾಣ.

ಕಿವಿ ನೋವು ಇದ್ದವರು ತಿಲಪರ್ಣಿಯ ರಸದೊಟ್ಟಿಗೆ ಎಳ್ಳೆಣ್ಣೆ, ಟಂಕಣ ಭಸ್ಮವನ್ನು ಸೇರಿಸಿ ಒಂದು ಬಿಂದುವನ್ನು ಕಿವಿಯಲ್ಲಿ ಹಾಕಬೇಕು. ಶೀಘ್ರ ಗುಣ ಕಾಣುತ್ತದೆ. ತಿಲಪರ್ಣಿಯ ಬೀಜ, ಎಲೆ ಮತ್ತು ಬೇರನ್ನೂ ಔಷಧ ತಯಾರಿಕೆಯಲ್ಲಿ ಬಳಸುತ್ತಾರೆ.